ಸಿ. ಸಿ. ನಂ.- **92/2021**

ಸಿ.ಡಬ್ಲ್ಯೂ.- **2** / ಪಿ.ಡಬ್ಲ್ಯೂ.- **2**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ **16-10-2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಮಂಜುನಾಥ ಡಿ ಟಿ |
| ತಂದೆಯ ಹೆಸರು - | ತಿಮ್ಮಪ್ಪ |
| ವಯಸ್ಸು - | **41** ವರ್ಷಗಳು |
| ಉದ್ಯೋಗ - | ಕ್ಯಾಷ ಇನಚಾರ್ಜ ಅಧಿಕಾರಿಯಾಗಿ ಎಸ್ ಬಿ ಐ ಮಡಗಶಿರ ಶಾಖೆಯಲ್ಲಿ ಕೆಲಸ |
| ವಾಸಸ್ಥಳ - | ಪಾವಗಡ, ತುಮಕೂರು |

ಮುಖ್ಯ ವಿಚಾರಣೆ-ಮಾನ್ಯ ಎ. ಪಿ. ಪಿ. ಅವರಿಂದ

ಸಾಕ್ಷಿ ನಿಪಿ-2 ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-3 ರಿಂದ 6ರ ಭಾವಚಿತ್ರಗಳಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ.

ದಿಃ **25.01.2016** ರಂದು ಹೊಸಪೇಟೆ ಶಾಖೆಯ ಎಸ್ ಬಿ ಹೆಚ್ ಬ್ಯಾಂಕ್ ನಲ್ಲಿ ಪಂಚನಾಮೆ ಜರುಗಿಸಲು ಪೊಲೀಸರು ಆ ಶಾಖೆಯ ಬ್ರಾಂಚ್ ಮ್ಯಾನೇಜರ್ ಬಳಿ ಅನುಮತಿ ಪಡೆದು, ನಮ್ಮಗಳ ಸಮಕ್ಷಮ ಪಂಚನಾಮೆ ಜರುಗಿಸಿದರು. ಸದರಿ ಬ್ಯಾಂಕ್ ನಲ್ಲಿ ಖಾತೆ ತೆರೆದ ಗ್ರಾಹಕರ ಖಾತೆಯಿಂದ ಬ್ಯಾಂಕ್ ನ ಸಿಬ್ಬಂದಿ ಅನಧೀಕೃತವಾಗಿ ಹಣದ ವರ್ಗಾವಣೆ ಮಾಡಿ, ಮೋಸ ಮಾಡಿರುತ್ತಾರೆ ಹಾಗೂ ಹಣಕಾಸಿನ ವ್ಯವಹಾರದಲ್ಲಿ ಮಿಸ್ ಅಪ್ರಾಪ್ರಿಯೇಟ್ ಮಾಡಿರುತ್ತಾರೆ ಎಂಬ ಕುರಿತು ನೀಡಿದ ದೂರಿಗೆ ಸಂಬಂಧಪಟ್ಟಂತೆ ಪೊಲೀಸರು ಈ ಪಂಚನಾಮೆ ಜರುಗಿಸಿರುತ್ತಾರೆ. ಈ ರೀತಿ ಆರೋಪಿ ಪೃಥ್ವಿರಾಜ್ ರವರು ಅವರ ಐಡಿ ಮುಖಾಂತರ ಈ ಮೇಲೆ ಹೇಳಿದಂತೆ ನಮ್ಮ ಬ್ಯಾಂಕಿನ ಗ್ರಾಹಕರ ಖಾತೆಯಿಂದ ಅನಧೀಕೃತವಾಗಿ ಹಣದ ವರ್ಗಾವಣೆ ಮಾಡಿ ಅವ್ಯವಹಾರ ಮಾಡಿರುತ್ತಾರೆ. ಈ ಕುರಿತು ನಮ್ಮ ಬ್ಯಾಂಕಿನ ಗ್ರಾಹಕರಾದ ಛಾಯಾ ಚಾಸಾ.10 ರವರು ದೂರು ಕೊಟ್ಟಿರುತ್ತಾರೆ. ಪೊಲೀಸರು ಸ್ಥಳಕ್ಕೆ ಬಂದು ಯಾವ ಗಣಕಯಂತ್ರದಿಂದ ಆರೋಪಿ ಈ ರೀತಿ ಅವ್ಯವಹಾರ ಮಾಡಿರುತ್ತಾರೆ ಎಂಬ ಬಗ್ಗೆ ಪರಿಶೀಲನೆ ಮಾಡಿ ಪಂಚನಾಮೆ ಜರುಗಿಸಿ, ಭಾವಚಿತ್ರವನ್ನು ಸಹ ತೆಗೆದಿರುತ್ತಾರೆ. ಪಂಚನಾಮೆಗೆ ಬ್ರಾಂಚ್ ಮ್ಯಾನೇಜರ್ ಮಾಹಿತಿ ಕೊಟ್ಟಿರುತ್ತಾರೆ, ಆದರೆ ಬಹಳ ವರ್ಷಗಳು ಆಗಿದ್ದರಿಂದ ಅವರ

ಸಿ. ಸಿ. ನಂ.- **92/2021**

ಸಿ.ಡಬ್ಲ್ಯೂ.- 2 / ಪಿ.ಡಬ್ಲ್ಯೂ.- 2

ಹೆಸರು ನೆನಪಿಲ್ಲ. ಈ ರೀತಿ ಮಧ್ಯಾಹ್ನ 1.00 ರಿಂದ 2.00 ಗಂಟೆವರೆಗೆ ಪಂಚನಾಮೆ ಜರುಗಿಸಿರುತ್ತಾರೆ. ಈ ರೀತಿ ಪಂಚನಾಮೆ ಜರುಗಿಸುವಾಗ ಪೊಲೀಸರು ಟ್ರಾನ್ಸಕ್ಷನ್ ವರದಿ ಪಡೆದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಪ್ರಕರಣದ ವಾಸ್ತವಾಂಶ, ಅಭಿಯೋಜನೆಯ ದಾಖಲೆಗಳು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರೀಶಿಲಿಸಿ ಸಕಾರಣ ಕಂಡು ಬಂದಿದ್ದರಿಂದ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು- ಮಾನ್ಯ ಎ. ಪಿ. ಪಿ. ಅವರಿಂದ-

ಆ ದಿನ ಚಾಸಾ.1 ರವರು ಸಹ ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿ. ಅಲ್ಲಿ ಚಾಸಾ.1 ರವರು, ಆರೋಪಿ 2015 ನೇ ಏಪ್ರೀಲ್ ನಿಂದ ನವೆಂಬರ್ 2015 ರ ಅವಧಿಯೊಳಗೆ ಸದರಿ ಬ್ಯಾಂಕ್ ಗ್ರಾಹಕರಾದ ಚಾಸಾ.10 ರಿಂದ 15 ರವರ ಖಾತೆಯಿಂದ ತಮ್ಮ ಸ್ನೇಹಿತರಾದ ಚಾಸಾ.16 ಮತ್ತು 17 ರವರ ಖಾತೆಗೆ ಹಣ ವರ್ಗಾವಣೆ ಮಾಡಿ, ಅವರ ಅಂದರೆ ಚಾಸಾ.16 ಮತ್ತು 17 ರವರ ಎ ಟಿ ಎಂ ಪಡೆದು ಅದರಿಂದ ಒಟ್ಟು ರೂ.13,80,671-00 ಗಳನ್ನು ಬಿಡಿಸಿಕೊಂಡಿರುತ್ತಾರೆ ಎಂದು ತಿಳಿಸಿ, ಈ ರೀತಿ ಹಣ ವರ್ಗಾವಣೆ ಮಾಡಲು ಉಪಯೋಗಿಸಿದ್ದ ಕಂಪ್ಯೂಟರ್ ನ್ನು ತೋರಿಸಿದ್ದರು ಎಂದರೆ ಸರಿ.

ಪಾಟೀಸವಾಲು- ಆರೋಪಿತರ ಪರ ವಕೀಲರಾದ ಶ್ರೀ ಜಿ ವಿ ಪಿ ರವರಿಂದ-

ಪಂಚನಾಮೆಗೆ ಬರಲು ಮ್ಯಾನೇಜರ್ ತಿಳಿಸಿದ್ದರು. ಈ ರೀತಿ ಮ್ಯಾನೇಜರ್ ಮೌಖಿಕವಾಗಿ ಪಂಚನಾಮೆಗೆ ಬರಲು ತಿಳಿಸಿದ್ದರು. ಪಂಚನಾಮೆ ಬರೆಯಲು ಮಾಹಿತಿಯನ್ನು ಮ್ಯಾನೇಜರ್ ರವರು ಕೊಟ್ಟಿರುತ್ತಾರೆ. ಚಾಸಾ.1 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ. ಸದರಿ ಪಂಚನಾಮೆಯನ್ನು ಪೊಲೀಸರು ಬರೆದಿರುತ್ತಾರೆ ಆದರೆ ಅವರ ಹೆಸರು ಗೊತ್ತಿಲ್ಲ. ಈ ಪಂಚನಾಮೆ ಜರುಗಿಸುವಾಗ ಟ್ರಾನ್ಸಕ್ಷನ್ ರಿಪೋರ್ಟ್ ನ್ನು ಪೊಲೀಸರು ಪಡೆದಿರುವ ಬಗ್ಗೆ ಪಂಚನಾಮೆಯಲ್ಲಿ ನಮೂದು ಆಗಿರುವುದು ನನಗೆ ನೆನಪಿಲ್ಲ. ನಿಪಿ-3 ರಿಂದ 6 ರ ಭಾವಚಿತ್ರಗಳಲ್ಲಿ ಸದರಿ ಟ್ರಾನ್ಸಕ್ಷನ್ ರಿಪೋರ್ಟ್ ನ್ನು ಪೊಲೀಸರಿಗೆ ಒಪ್ಪಿಸಿದ್ದ ದೃಶ್ಯ ಕಾಣುತ್ತಿಲ್ಲ ಎಂದರೆ ಸಾಕ್ಷಿ ಹೀಗೆ ರಿಪೋರ್ಟ ಕೊಡುವಾಗ ಭಾವಚಿತ್ರ ತೆಗೆಯದೇ ಇರಬಹುದು ಆದ್ದರಿಂದ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರಗಳನ್ನು ಯಾರು ಯಾವ ಯಂತ್ರಗಳಿಂದ ತೆಗೆದಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಭಾವಚಿತ್ರಗಳನ್ನು ತೆಗೆದ ಬಗ್ಗೆ ಪಂಚನಾಮೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

ಆರೋಪಿಯೇ ಹಣದ ಅವ್ಯವಹಾರ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ವ್ಯಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಗ್ರಾಹಕರು ದೂರು ಕೊಟ್ಟ ನಂತರ ಖಾತಾ ವಿವರ ನೋಡಿದ ಮೇಲೆ ಅದರ ಬಗ್ಗೆ ತಿಳಿಯಿತು ಎಂದು ನುಡಿಯುತ್ತಾರೆ. ನಿಪಿ-2 ಪಂಚನಾಮೆ ಜರುಗಿಸುವಾಗ ಅಲ್ಲಿ ಇತರೆ ಸಾರ್ವಜನಿಕರು ಇದ್ದರು ಎಂದರೆ ಸರಿ. ಆ ದಿನ ಪಂಚನಾಮೆ ಜರುಗಿಸದೇ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಮಾಹಿತಿ ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ಚಾಸಾ.1 ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ-
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.